ವರ್ಷಕ್ಕೆ 5600 ಕೋಟಿ ಆದಾಯ ಬರುತ್ತದೆಂದು ಅಂದಾಜು ಹಾಕಿಕೊಂಡಿದ್ದೀರಿ. ಇವೆಲ್ಲವನ್ನು ಮಾಡದಿದ್ದರೆ ಆ ಹಣ ಬಂದುಬಿಡುತ್ತದೆಯೇ? How shall you collect so much money without strict enforcement? ದಯವಿಟ್ಟು ಇವೆಲ್ಲಾ ಮಾಡದೆಯೇ, ಇವತ್ತಿ ಇಂಥ ಸುವರ್ಣಾವಕಾಶವನ್ನು ಯಡಿಯೂರಪ್ಪನವರು ಕಳೆದುಕೊಂಡುಬಿಟ್ಟರಲ್ಲಾ ಎಂದು ನನಗೆ ಬಹಳ ನೋವಾಗುತ್ತದೆ. ಈ ರಾಜ್ಯವನ್ನು ಪ್ರಗತಿಯತ್ತ ತೆಗೆದುಕೊಂಡು ಹೋಗಲು ಅವಕಾಶ ಸಿಕ್ಕಿತ್ತು. He lost it. ನನಗೆ ಇಂಥ ಸುವರ್ಣಾವಕಾಶ ಸಿಗದೇ ಹೋಯಿತು, ನನಗೆ ಇಂಥ ಅವಕಾಶ ಸಿಗಬೇಕಾಗಿತ್ತು. ಸಿಗಲಿಲ್ಲವೆಂದು ನೋವಾಯಿತು. ನಾನು ಇದ್ದದ್ದೇ 1 ವರ್ಷ 2 ತಿಂಗಳು. ಅಷ್ಟರಲ್ಲೇ Fiscal Deficit ಇಳಿಸಿ, Revenue Deficit ತೆಗೆದುಹಾಕಿ, 3584 ಕೋಟಿಯಿಂದ 1680 ಕೋಟಿಯವರೆಗೆ ಅದನ್ನು ತೆಗೆದುಕೊಂಡು ಬಂದಿದ್ದೆವು. Deficit ನಿಂದ Surplus ಗೆ ತೆಗೆದುಕೊಂಡು ಬಂದಿದ್ದೆವು. 2006-07 ರಲ್ಲಿ ಸರ್‌ಪ್ಲಸ್ 4152 ಕೋಟಿಗೆ ಹೋಗಿತ್ತು. Again ಈ ಮೇಲಿನಿಂದ ಕೆಳಕ್ಕೆ ಬಂದುಬಿಟ್ಟಿದೆ. ಆ ರೀತಿ ಕೆಳಕ್ಕೆ ಹೋಗಲು ಬಿಡಬೇಡಿ. ಅದು ಹಾಗೆಯೇ ಮೇಲಕ್ಕೆ ಹೋಗಲು ಬಿಡಿ. ಮೇಲಕ್ಕೆ ಹೋಗಲಿ ಇಲ್ಲದಿದ್ದರೆ ಆ ನಿಟ್ಟಿನಲ್ಲೇ ಹೋಗಲಿ. ಇದರಲ್ಲಿ ಯಾರ ಕೈವಾಡವಿದೆ? ಯಾರ ಬೇಜವಾಬ್ದಾರಿ ಇದೆ? ಇವೆಲ್ಲಾ failures ಅಲ್ಲವೇ? ಆದ್ದರಿಂದ ಈ ಆಯವ್ಯಯದಲ್ಲಿ ಪಾರ್ಲಿಮೆಂಟ್ ಚುನಾವಣೆ, ಕಾರ್ಪೊರೇಷನ್ ಚುನಾವಣೆ ಬರುತ್ತದೆ ಎಂದು ಮೂಗಿಗೆ ತುಪ್ಪ ಹಚ್ಚುವ ಕೆಲಸವನ್ನು ಮಾಡಿ ಈ ರಾಜ್ಯದ ಬೆಳವಣಿಗೆಯನ್ನು ಹಾಳು ಮಾಡತಕ್ಕ ಕೆಲಸವಾಗಿದೆ. ಇರತಕ್ಕ ಸಂಪನ್ಮೂಲದಲ್ಲಿ ರಾಜ್ಯವನ್ನು ಎಷ್ಟು ಬೆಳೆಸಬಹುದಾಗಿತ್ತೊ, ಅದನ್ನು ಮಾಡಲು ಇವರಿಂದ ಸಾಧ್ಯವಾಗಿಲ್ಲ. Mr. Yediyurappa has failed. ರೈತರಿಗೂ ಇಲ್ಲ, ಯಾರಿಗೂ ಇಲ್ಲ. ಇಷ್ಟು ಹೇಳಿ ನಾನು ಬಹಳ ನೋವಿನಿಂದ ಈ ಬಜೆಟ್‌ನ್ನು ವಿರೋಧ ಮಾಡಬೇಕಾಗಿದೆ. ಆದ್ದರಿಂದ ಈ ಬಜೆಟ್‌ನ್ನು ವಿರೋಧ ಮಾಡಿ ನನಗೆ ಇಷ್ಟು ಮಾತನಾಡಲು ಸಮಯ ಕೊಟ್ಟಿದ್ದಕ್ಕೆ ನಿಮಗೆ ಧನ್ಯವಾದವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5. ಪ್ರಕಟಣೆ

ವಿಷಯ : ನೈಸರ್ಗಿಕ ಕೃಷಿ ಪದ್ಧತಿ ಕುರಿತು ಅರಿವು ತಿಳುವಳಿಕೆ ಮೂಡಿಸುವ ಉಪನ್ಯಾಸ ಕಾರ್ಯಕ್ರಮ ಉದ್ಘಾಟನೆ ಸಮಾರಂಭ

ಅಧ್ಯಕ್ಷರು : ಈ ದಿನ ಸಂಜೆ 6.00 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ನೈಸರ್ಗಿಕ ಕೃಷಿ ಪದ್ಧತಿ ಕುರಿತು ಅರಿವು ತಿಳುವಳಿಕೆ ಮೂಡಿಸುವ ಉಪನ್ಯಾಸ ಕಾರ್ಯಕ್ರಮದ ಉದ್ಘಾಟನೆ ಸಮಾರಂಭ ನಡೆಯಲಿದೆ. ಸದರಿ ಸಮಾರಂಭಕ್ಕೆ ಈಗಾಗಲೇ ಶಾಸಕರುಗಳಾದ ತಮ್ಮೆಲ್ಲರನ್ನೂ ಆಹ್ವಾನಿಸಲಾಗಿದೆ. ತಾವುಗಳು ತಪ್ಪದೇ ಸದರಿ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಈಗ ಮತ್ತೊಮ್ಮೆ ಪುನಃ ಕೋರಲಾಗಿದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 31 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ನಾಳೆ ಅಂದರೆ 22 ನೇ ಜುಲೈ 2008 ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳುವಂತೆ ಮುಂದೂಡಲಾಯಿತು)